ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಮಾಝನ್ನು ಪ್ರಾರಂಭಿಸುವಾಗ ತಮ್ಮ ಎರಡು ಕೈಗಳನ್ನು ಹೆಗಲಿಗೆ ಸಮಾನಾಂತರವಾಗಿ ಎತ್ತುತ್ತಿದ್ದರು

ಇಬ್ನ್ ಉಮರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಮಾಝನ್ನು ಪ್ರಾರಂಭಿಸುವಾಗ
ತಮ್ಮ ಎರಡು ಕೈಗಳನ್ನು ಹೆಗಲಿಗೆ ಸಮಾನಾಂತರವಾಗಿ ಎತ್ತುತ್ತಿದ್ದರು. ಅದೇ ರೀತಿ, ರುಕೂ ಮಾಡುವಾಗಲೂ, ರುಕೂವಿನಿಂದ ತಲೆ ಎತ್ತುವಾಗಲೂ ಕೈಗಳನ್ನು ಎತ್ತುತ್ತಿದ್ದರು ಮತ್ತು "ಸಮಿಅಲ್ಲಾಹು ಲಿಮನ್ ಹಮಿದ, ರಬ್ಬನಾ ವಲಕಲ್ ಹಮ್ದ್" ಎಂದು ಹೇಳುತ್ತಿದ್ದರು. ಆದರೆ ಸುಜೂದ್ನಲ್ಲಿ ಅವರು ಹೀಗೆ ಮಾಡುತ್ತಿರಲಿಲ್ಲ. [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಮಾಝ್ ಮಾಡುವಾಗ ಮೂರು ಸ್ಥಳಗಳಲ್ಲಿ ಕೈಗಳನ್ನು ಹೆಗಲಿಗೆ—ಅಂದರೆ ಭುಜ ಮತ್ತು ತೋಳಿನ ಮೇಲ್ಭಾಗದ ಎಲುಬು ಸೇರುವ ಸ್ಥಳ—ಸಮಾನಾಂತರವಾಗಿ ಎತ್ತುತ್ತಿದ್ದರು. ಮೊದಲನೆಯ ಸ್ಥಳ: ನಮಾಝ್ ಪ್ರಾರಂಭಿಸುವಾಗ ತಕ್ಬೀರತುಲ್- ಇಹ್ರಾಮ್ ಪಠಿಸುವ ಸಂದರ್ಭದಲ್ಲಿ. ಎರಡನೆಯದು: ರುಕೂ ಮಾಡಲು ತಕ್ಬೀರ್ ಹೇಳುವಾಗ. ಮೂರನೆಯದು: ರುಕೂವಿನಿಂದ ತಲೆ ಎತ್ತಿ "ಸಮಿಅಲ್ಲಾಹು ಲಿಮನ್ ಹಮಿದ, ರಬ್ಬನಾ ವಲಕಲ್ ಹಮ್ದ್" ಎಂದು ಹೇಳುವಾಗ. ಆದರೆ, ಸುಜೂದ್ ಮಾಡುವಾಗ ಅಥವಾ ಸುಜೂದ್ನಿಂದ ತಲೆ ಎತ್ತುವಾಗ ಅವರು ಕೈಗಳನ್ನು ಎತ್ತುತ್ತಿರಲಿಲ್ಲ.

http://sunnah.global/hadeeth/kn/show/3095